ನವಸಾಕ್ಷರ ಪುಸ್ತಕ ಮಾಲೆ ೧೦೧

ಪುಣ್ಯಕೋಟಿ

ಟಿ.ಪಿ. ಅಶೋಕ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಅಧ್ಯಕ್ಷರು

ಡಾ. ಚಂದ್ರಶೇಖರ ಕಂಬಾರ

ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ

ಶ್ರೀ ಲೂಕೋಸ್ ವಲ್ಲತರೈ ಐ. ಎ. ಎಸ್.

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಉನ್ನತ ಸಲಹಾ ಸಮಿತಿ ಸದಸ್ಯರು

ಶ್ರೀಯುತರಾದ

ಹಾ. ಮಾ. ನಾಯಕ

ಎಚ್. ನರಸಿಂಹಯ್ಯ

ಜಿ. ನಾರಾಯಣ

ಎಲ್. ಎಸ್. ಶೇಷಗಿರಿರಾವ್

ಶಾಂತರಸ

ಕೆ. ವಿ. ಸುಬ್ಬಣ್ಣ

ಗೊ. ರು. ಚನ್ನಬಸಪ್ಪ

ಪಿ. ಎಸ್. ಶಂಕರ್

ಶಿವಶಂಕರ ಹಿರೇಮಠ

ಆರ್. ಎಸ್. ರಾಜಾರಾಮ್

ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ

ಎಸ್. ಜಿ. ನಾಗಲೋಟಿಮಠ

ಕೆ. ವಿ. ನಾರಾಯಣ

ಪುರುಷೋತ್ತಮ ಬಿಳಿಮಲೆ

ಕರೀಗೌಡ ಬೀಚನಹಳ್ಳಿ

ಅಮೃತ ಸೋಮೇಶ್ವರ

ಸಿ. ಆರ್. ಚಂದ್ರಶೇಖರ್

ಬಿ. ಎ. ಶ್ರೀಧರ

ಲಿಂಗದೇವರು ಹಳೆಮನೆ

ಭ. ಮಲ್ಲಿಕಾರ್ಜುನ

ಮಹಾಬಲೇಶ್ವರರಾವ್

ಭಕ್ತಪ್ರಿಯ

ಎಂ. ಪಿ. ಪರಮಶೇಖರಯ್ಯ

ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೧೦೧

ಪುಣ್ಯಕೋಟಿ

ಟಿ. ಪಿ. ಅಶೋಕ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೧೧

PUNYAKOTI : By T. P. Ashoka. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಡಾ. ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಗುರುದತ್ ಪ್ರಿಂಟರ್ಸ್
೯೧, ೪ನೇ ಕ್ರಾಸ್, ೧ನೇ ಮೇನ್
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಮೈಸೂರು ರಸ್ತೆ,
ಬೆಂಗಳೂರು ೫೬೦ ೦೨೬

ಪುಣ್ಯಕೋಟಿ

"ಗೋವಿನ ಹಾಡು" ಎಂಬ ಒಂದು ಜನಪದ ಹಾಡು ಪ್ರಸಿದ್ಧವಾಗಿದೆ. ಈ ಹಾಡನ್ನು ಕಟ್ಟಿದ ಕವಿ ಯಾರೆಂಬುದು ತಿಳಿದಿಲ್ಲ. ಇಲ್ಲಿ ಹೇಳಿರುವ ಕತೆ ಬಹಳ ಹಳೆಯದು. ಈ ಕತೆಯನ್ನು ಮೊದಲು ಭೀಷ್ಮನು ಧರ್ಮರಾಜನಿಗೆ ಹೇಳಿದನಂತೆ.

"ಗೋವಿನ ಹಾಡು" ಮೇಲು ನೋಟಕ್ಕೆ ಒಂದು ಸರಳ ನೀತಿಪರ ಕಥೆಯಾಗಿದೆ. ಆದರೆ ಈ ಕಥೆ ವಿವಿಧ ವಯಸ್ಸಿನ, ಹಿನ್ನೆಲೆಯ ಓದುಗರಿಗೆ ವಿಭಿನ್ನವಾದ ಅನುಭವವನ್ನು ನೀಡುವಂತಿದೆ.

ಇಲ್ಲಿ ಬರುವ ಕಾಡಿನ ವರ್ಣನೆ ಮಕ್ಕಳಿಗೆ ಗಿಡಮರ, ಪಶು-ಪಕ್ಷಿಗಳ ಪರಿಚಯ ಮಾಡಿಕೊಡುತ್ತದೆ. ಕಾಳಿಂಗನ ವರ್ಣನೆ ಒಂದು ಜೀವನ ಕ್ರಮದ ವರ್ಣನೆಯೇ ಆಗಿದೆ. ಪುಣ್ಯಕೋಟಿ-ಅರ್ಬುತ, ಪುಣ್ಯಕೋಟಿ-ಕರು, ಪುಣ್ಯಕೋಟಿ



ಪುಣ್ಯಕೋಟಿ

ಮತ್ತು ಇತರ ಹಸುಗಳ ಸಂಭಾಷಣೆ ಸೃಷ್ಟಿಯಾಗುವ ಬಗೆ, ಅವುಗಳು ಪರಿಹಾರ ಪಡೆಯುವ ರೀತಿ ಬಹಳ ಚೆನ್ನ. ಇಲ್ಲಿ ಯಾವುದೂ ಅಸಹಜವೆನಿಸದಂತೆ ಕವಿ ನಾಜೂಕಿನಿಂದ ಕಥೆ ಕಟ್ಟಿದ್ದಾನೆ.

ಇಲ್ಲಿ ಬಳಸಿರುವ ಲಯ, ಲವಲವಿಕೆಯ ನಿರೂಪಣೆ, ಸರಳ ಕಥಾಬಂಧಗಳಿಂದ ವಿವರಗಳನ್ನು ನೆನಪಿಟ್ಟುಕೊಳ್ಳುವುದು ಸುಲಭ. ಕಥೆಗೆ ಭಾರವಾಗದ ರೀತಿಯಲ್ಲಿ ಕವಿ ಬದುಕಿನ ರೀತಿಗಳನ್ನು ಹೇಳುತ್ತಾನೆ. ಅವೆಂದರೆ ಒಳಿತು ಮತ್ತು ಕೆಡುಕಿನ ಪ್ರಶ್ನೆಗಳು. ಪುಣ್ಯಕೋಟಿ ತನ್ನ ಸಮಸ್ಯೆಗಳನ್ನು ಸತ್ಯ, ಪ್ರಾಮಾಣಿಕತೆ, ದಿಟ್ಟತನಗಳಿಂದ ಎದುರಿಸುತ್ತದೆ. ಮತ್ತು ಆ ಪ್ರಯತ್ನದಲ್ಲಿ ಯಶಸ್ಸನ್ನು ಗಳಿಸುತ್ತದೆ.

ಹೀಗೆ ಸತ್ಯ, ಅಹಿಂಸೆಗಳು, ಆದರ್ಶಗಳೇ ಆಗುತ್ತವೆ. ಪುಣ್ಯಕೋಟಿಯು ಹುಲಿಯನ್ನು ಗೆಲ್ಲುವುದು ದೈಹಿಕ ಬಲದಿಂದಲೂ ಅಲ್ಲ, ಯುಕ್ತಿಯಿಂದಲೂ ಅಲ್ಲ; ಕೆಲವು ಒಳ್ಳೆಯ ಮೌಲ್ಯಗಳಿಂದ ಈ ಒಳ್ಳೆಯ ಮೌಲ್ಯಗಳು ಎಂದಾಗ ಅವು ದುರ್ಬಲ ಎಂದು ತಿಳಿಯಬಾರದು. ಇದು ಇಲ್ಲಿನ ಗಮನಾರ್ಹ ಅಂಶ.

ಪುಣ್ಯಕೋಟಿ ಹುಲಿಗೆ ಭಾಷೆ ಕೊಡುವುದು ಆ ಕ್ಷಣದಲ್ಲಿ ಹುಲಿಯಿಂದ ತಪ್ಪಿಸಿಕೊಳ್ಳುವ ಉಪಾಯಕ್ಕಾಗಿ ಅಲ್ಲ. ಅಥವಾ ಕರುವಿಗೆ ಮೊಲೆಕೊಟ್ಟು ಹುಲಿಯ ಬಳಿಗೆ ವಾಪಾಸಾಗುವುದು ಹುಲಿಯ ಮೇಲಿನ ಭಯದಿಂದಲೂ ಅಲ್ಲ. ತನ್ನ ಕರು ಸೂಚಿಸುವಂತೆ ಪುಣ್ಯಕೋಟಿ ಹುಲಿಯ ಬಳಿಗೆ ವಾಪಸ್ಸು ಹೋಗದೆ ಸುಮ್ಮನಿರಬಹುದಿತ್ತು. ಅಥವಾ ಎಲ್ಲ ಹಸುಗಳನ್ನು



ಅರುಣಾದ್ರಿ ಬೆಟ್ಟ

ತನ್ನೊಂದಿಗೆ ಕರೆದೊಯ್ಯಬಹುದಿತ್ತು. ಆದರೆ ಅದು ಹಾಗೆ ಮಾಡುವುದಿಲ್ಲ. ತನ್ನ ಸತ್ಯ ಮತ್ತು ನಿಷ್ಠೆಯ ಬಲದ ಮೇಲೆಯೇ ಅದು ಹುಲಿಯೊಂದಿಗೆ ವ್ಯವಹರಿಸುತ್ತದೆ.

ಹುಲಿಯೊಂದಿಗೆ ಕಾದಾಡುವುದಿಲ್ಲ. ಅದರ ಮನಸ್ಸನ್ನು ಗೆಲ್ಲುತ್ತದೆ. ಹಿಂಸೆಗೆ ಪ್ರತಿ ಹಿಂಸೆ ಹೂಡುವುದಿಲ್ಲ. ಹೃದಯ ಪರಿವರ್ತನೆ ಮಾಡುತ್ತದೆ. ಹೀಗೆ ಪುಣ್ಯಕೋಟಿಯ ಜಯ ಸತ್ಯ ಅಹಿಂಸೆಗಳ ಜಯವೇ ಆಗುತ್ತದೆ. ಈ ಜೀವಪರವಾದ ಕಥೆನಮ್ಮಲ್ಲಿ ಗಾಂಧೀಜಿಯ ನೆನಪುಗಳನ್ನು ಉಕ್ಕಿಸುತ್ತದೆ. ಸತ್ಯ-ಅಹಿಂಸೆಗಳು ಕೈಗೆಟುಕದ ಆದರ್ಶಗಳೇನಲ್ಲ. ಇದು ನಮ್ಮ ಛಲದ, ನಿಷ್ಠೆಯ ಪ್ರಶ್ನೆಯೂ ಹೌದು. ನಮ್ಮ ದೈನಂದಿನ ಜೀವನದಲ್ಲಿ ಎಲ್ಲೆಡೆ ಹಿಂಸೆಯೇ ರಾರಾಜಿಸುತ್ತಿರುವ ಈ ಹೊತ್ತಿನಲ್ಲಿ ಪುಣ್ಯಕೋಟಿ ಕಥೆಯು ನಮಗೆಲ್ಲಾ ಹೊಸ ಶಕ್ತಿಯನ್ನೂ, ಭರವಸೆಯನ್ನೂ ನೀಡಲಿ ಎಂದು ಹಾರೈಸೋಣ.

ಪುಣ್ಯಕೋಟಿಯ ಕಥೆ

ಒಂದು ಗುಡ್ಡಗಾಡಿನ ಪ್ರದೇಶದಲ್ಲಿ ಅರುಣಾದ್ರಿಗಿರಿ ಎಂಬ ಬೆಟ್ಟವಿತ್ತು. ಆ ಬೆಟ್ಟವನ್ನು ಅನೇಕ ಚಿಕ್ಕ ಗುಡ್ಡಗಳು ಸುತ್ತುವರಿದಿದ್ದವು. ಅಲ್ಲಿ ಒಂದು ದಟ್ಟವಾದ ಕಾಡು ಇತ್ತು. ಆ ಕಾಡಿನಲ್ಲಿ ಮಾವು, ನೇರಳೆ, ನಾಗಸಂಪಿಗೆ, ತೇಗ, ಬನ್ನಿ, ಆಲ, ಅರಳಿ, ಜಾಲ, ಶ್ರೀಗಂಧ ಮುಂತಾದ ಮರಗಳು ಸೊಂಪಾಗಿ ಬೆಳೆದು ನಿಂತಿದ್ದವು. ಬಿದಿರು,, ತಾಳೆ, ಬೂರಗಗಳು



ಪುಣ್ಯಕೋಟಿ ನೆಲೆಸಿದ್ದ ಅರುಣಾದ್ರಿ ಬೆಟ್ಟದ ಇನ್ನೊಂದು ದೃಶ್ಯ

ಸ್ವಚ್ಛಂದವಾಗಿ ಬೆಳೆದುಕೊಂಡಿದ್ದವು. ಹಲಸು, ಅಡಕೆ, ತೆಂಗಿನ ಮರಗಳೂ ಅಲ್ಲಿ ಇದ್ದವು. ಮೊಲ್ಲೆ, ಮಲ್ಲಿಗೆ, ಸಂಪಿಗೆ, ಜಾಜಿ, ಸುರಗಿ, ಸುರಹೊನ್ನೆಗಳ

ಪರಿಮಳವು ಇಡೀ ಕಾಡನ್ನು ತುಂಬಿತ್ತು. ಹೀಗೆ ಬಗೆ ಬಗೆಯ ಹೂವು ಹಣ್ಣುಗಳಿಂದ ಆ ಅರಣ್ಯವು ಸಮೃದ್ಧವಾಗಿತ್ತು.

ಅಲ್ಲಿ ಹುಲಿ, ಕರಡಿ, ಸಿಂಹ, ಕಾಡೆಮ್ಮೆ, ಜಿಂಕೆ ಮೊದಲಾದ ಪ್ರಾಣಿಗಳಿದ್ದವು. ಗಿಳಿ, ಕೋಗಿಲೆ, ನವಿಲು, ಪಾರಿವಾಳ, ಕಾಡುಕೋಳಿ ಮುಂತಾದ ಪಕ್ಷಿಗಳಿದ್ದವು. ಆ ವನದಲ್ಲಿ ಹಂಸ, ಚಕೋರಗಳೂ ಇದ್ದವು. ಆಗಾಗ ಆನೆಗಳು ಘೀಳಿಡುವ ಸದ್ದು ಕೇಳಿ ಬರುತ್ತಿತ್ತು. ಮೊಲಗಳು, ಮಂಗಗಳು ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದವು. ಎತ್ತರವಾದ ಮರಗಳ ಟೊಂಗೆಗಳ ಮೇಲೆ ಕೂತು ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದವು. ಬಗೆಬಗೆಯ ಸರ್ಪಗಳು, ರಣಹದ್ದುಗಳೂ ಆ ಕಾಡಿನಲ್ಲಿ ಇದ್ದವು. ಅಲ್ಲಿ ಪುಣ್ಯತೀರ್ಥ, ಸತ್ಯಸಾಗರ, ಗೌತಮಿ, ಉತ್ತಮಾ ಎಂಬ ನದಿಗಳಿದ್ದವು. ಕೆಲವು ಕಡೆ ಋಷಿ ಮುನಿಗಳು ತಪಸ್ಸು ಮಾಡುತ್ತಿದ್ದರು.

ಈ ಬೆಟ್ಟಗಳ ಎಡೆಯಲ್ಲಿ ಅಡವಿ ಮಧ್ಯದಲ್ಲಿ ಕಾಳಿಂಗ ಎಂಬ ಗೊಲ್ಲನು ವಾಸಮಾಡುತ್ತಿದ್ದನು. ಅವನ ದೊಡ್ಡಿಯ ತುಂಬಾ ಹಸುಗಳು, ಎತ್ತುಗಳು, ಕರುಗಳು ಇದ್ದವು. ಹಸುಗಳು ಪ್ರತಿದಿನವೂ ಬೆಟ್ಟದ ಮೇಲೆ ಹುಲ್ಲು ಮೇಯಲು ಹೋಗುತ್ತಿದ್ದವು. ಆ ಹುಲ್ಲು ಸಕ್ಕರೆಯಷ್ಟು ಸವಿ. ಹಸುಗಳು ತೃಪ್ತಿಯಾಗುವಷ್ಟು ಹುಲ್ಲು ಮೇಯ್ದು ಗೊಲ್ಲನ ದೊಡ್ಡಿಗೆ ಮರಳುತ್ತಿದ್ದವು. ಈ ಹಸುಗಳೆಂದರೆ ಗೊಲ್ಲಗೌಡನಿಗೆ ತುಂಬಾ ಪ್ರೀತಿ. ಅವುಗಳಿಗೆ ಗಂಗೆ, ಗೌರಿ, ತುಂಗಭದ್ರ, ಪುಣ್ಯಕೋಟಿ, ಪಾರ್ವತಿ, ಲಕ್ಷ್ಮಿ, ರಂಗನಾಯಕಿ ಮುಂತಾಗಿ ಹೆಸರುಗಳನ್ನು ಇಟ್ಟಿದ್ದನು.



ಕಾಳಿಂಗನೆಂಬ ಗೊಲ್ಲ

ಗಂಗೆ ಬಾರೇ ಗೌರಿ ಬಾರೇ
ತುಂಗಭದ್ರೆಯ ನೀನು ಬಾರೇ
ಅಂಗನಾಮಣಿ ನೀನು ಬಾರೇ



ಹಸುಗಳನ್ನು ಕರೆಯುತ್ತಿರುವ ಕಾಳಿಂಗ

ಎಂದು ಹಸುಗಳನ್ನು ಹೆಸರು ಹಿಡಿದು ಕರೆಯುತ್ತಿದ್ದನು. ಅವನು ಕರೆದ ಕೂಡಲೇ ಹಸುಗಳೆಲ್ಲ ಅವನ ಬಳಿಗೆ ಓಡಿ ಬರುತ್ತಿದ್ದವು. ಬಿಂದಿಗೆ ತುಂಬಾ ಹಾಲು ಕೊಡುತ್ತಿದ್ದವು. ಗೊಲ್ಲನು ಪ್ರತಿದಿನ ಮಾವಿನ ಮರದ ಕೆಳಗೆ ಕೂತು ಕೊಳಲನ್ನು ಊದುವುದು; ಹಸುಗಳು ಬೆಟ್ಟದ ಮೇಲೆ



ಅಬ್ಬುತನೆಂಬ ಹುಲಿ

ಹುಲ್ಲು ಮೇಯುವುದು; ಸಂಜೆಯಾದೊಡನೆ ದೊಡ್ಡಿಗೆ ವಾಪಸ್ಸು ಬರುವುದು – ಹೀಗೆ ಜೀವನ ಸಾಗಿತ್ತು.

ಹಬ್ಬಿದಾ ಮಲೆ ಮಧ್ಯದೊಳಗೆ
ಅರ್ಬುತಾನೆಂತೆಂಬ ವ್ಯಾಘ್ರನು
ಗಬ್ಬಿತನದೊಳು ಬೆಟ್ಟದಾ ಅಡಿ
ಕಿಬ್ಬಿಯೊಳು ತಾನಿರುವನು

ಒಡಲಿಗೇಳು ದಿವಸದಿಂದ
ತಡೆದಾಹಾರವ ಬಳಲಿ ವ್ಯಾಘ್ರನು
ಅಡಗಿಕೊಂಡು ಗವಿಯ ಬಾಗಿಲ
ಹೊಡನುಡಿಯ ಆಲಿಸುತಿರ್ದನು

ಈ ಕಾಲದಲ್ಲಿ ಅರ್ಬುತ ಎಂಬ ಒಂದು ಹುಲಿ ಇತ್ತು. ಬೆಟ್ಟದ ಬುಡದಲ್ಲಿರುವ ಗುಹೆಯೊಂದರಲ್ಲಿ ಅದರ ವಾಸ. ಅದಕ್ಕೆ ಏಳು ದಿನಗಳಿಂದ ಆಹಾರ ಸಿಕ್ಕಿರಲಿಲ್ಲ. ತುಂಬಾ ಹಸಿವಾಗಿತ್ತು. ಹಸಿವಿನಿಂದ ಸಿಟ್ಟೂ ಬಂದಿತ್ತು. ಯಾವುದಾದರೂ ಪ್ರಾಣಿ ತನ್ನ ಗವಿಯ ಬಳಿ ಬಂದರೆ ಹಾರಿ ಹಿಡಿದುಕೊಳ್ಳಬೇಕೆಂದು ಹೊಂಚು ಹಾಕಿ ಕಾಯುತ್ತಿತ್ತು. ಸಂಜೆಯಾದಂತೆ ಗಂಟೆಗಳ ಕಿಣಿಕಿಣಿ ಸದ್ದು ಕೇಳಿಸಿತು. "ಆಹಾ, ಇವತ್ತು, ನನಗೆ ಆಹಾರ ಸಿಕ್ಕಿತು" ಎಂದುಕೊಂಡು ಹುಲಿಯು ಗುಹೆಯಿಂದ ಹೊರಬಂದಿತು. ಕಾಳಿಂಗ ಗೌಡನ ಗೋವುಗಳು ದೊಡ್ಡಿಯತ್ತ ಹೊರಟ್ಟಿದ್ದವು. ಹುಲಿಯು ಜೋರಾಗಿ ಘರ್ಜಿಸುತ್ತಾ ಗೋಮಂದೆಯತ್ತ ಹಾರಿ ಬಂದಿತು. ಗೋವುಗಳು ಭಯದಿಂದ ಚೀರಾಡುತ್ತ ಚೆಲ್ಲಾಪಿಲ್ಲಿಯಾದವು. ಬೇಟೆ ಕೈಗೆ ಸಿಗಲಿಲ್ಲವಲ್ಲ ಎಂದು ಹುಲಿಯು ಮತ್ತೂ ಕೋಪಗೊಂಡು ಹಲ್ಲು ಕಡಿಯುತ್ತಾ ದಿಕ್ಕು ದಿಕ್ಕಿಗೆ ನೋಡಿತು.



ಹಸು ಬರುತ್ತಿರುವುದನ್ನು ಹುಲಿ ನೋಡುತ್ತಿರುವುದು

ಅಡವಿಯ ಮಧ್ಯದಲ್ಲಿ ಪುಣ್ಯಕೋಟಿಯು ಬರುತ್ತಿರುವುದು ಕಾಣಿಸಿತು. ಆವತ್ತು ಪುಣ್ಯಕೋಟಿ ಸ್ವಲ್ಪ ಹಿಂದೆ ಬಿದ್ದಿತ್ತು, ತನ್ನ ಕರುವನ್ನು ನೆನೆಯುತ್ತಾ ನಲಿದು ನೆಗೆಯುತ್ತಾ ಬರುತ್ತಿತ್ತು. ಇಂದು ನನಗೆ ಆಹಾರ ಸಿಕ್ಕಿತು ಎಂದುಕೊಳ್ಳುತ್ತಾ ಹುಲಿಯು ಬಳಸಿ ಬಂದು ಪುಣ್ಯಕೋಟಿಯ ದಾರಿಯನ್ನು ಅಡ್ಡಗಟ್ಟಿತು.

ಹೊಲನ ಗದ್ದೆಯ ಹಾಳು ಮಾಡಿದೆ
ಬೆಳೆದ ಪೈರನು ಸವಿದು ಕೆಡಿಸಿದೆ
ಬಳಿಕ ಎನ್ನಯ ಗವಿಯ ಬಳಿಗೆ
ತಳುಗದೆ ನೀ ಬಂದೆಯಾ

ಎಂದು ಹುಲಿಯು ಹಸುವನ್ನು ಬೆದರಿಸಿತು. ಅದರ ಮೇಲೆ ದೋಷಾರೋಪಣೆ ಮಾಡಿತು. ನಿನ್ನನ್ನು ಈಗಲೇ ಸೀಳಿ ಬಿಸುಡುವೆನೆಂದು ಅಬ್ಬರಿಸಿತು. ಹಸು ಮೆಲ್ಲನೆ ಉತ್ತರಿಸಿತು.

ಹಾಳು ಮಾಡುವ ಗರತಿಯಲ್ಲ
ಬೀಳು ಮಾಡುವ ಗೈಮೆಯಲ್ಲ
ಬಾಳುವಂತೆ ಮಾಳ್ಪೆ ಧರೆಯೊಳು
ಕೇಳಯ್ಯ ಹುಲಿರಾಯನೆ

ನಾನು ಮೆಟ್ಟಿದ ಭೂಮಿ ಬೆಳೆವುದು
ಧಾನ್ಯಧನಗಳನುಂಟು ಮಾಡುವೆ
ಶಾನೆ ಕ್ಷೀರವ ಕೊಡುವೆ ನಿತ್ಯವು
ಮಾನವರಿಗುಪಕಾರಿಯು

ಅಡವಿಯೊಳಗಣ ಹುಲ್ಲ ಮೇಯುವೆ
ಮಡುವಿನೊಳಗಣ ನೀರ ಕುಡಿಯುವೆ
ಒಡೆಯನಾಜ್ಞೆಯಿಂದಲಿರುವೆನು
ಕಡೆಹಾಯಿಸು ಹುಲಿರಾಯನೆ



ಹಸುವನ್ನು ತಿನ್ನುವುದಾಗಿ ಹುಲಿ ಬೆದರಿಸಿತು

ಹಸುವಿನ ಉತ್ತರದಿಂದ ಹುಲಿಯ ಸಿಟ್ಟು ತಣಿಯಲಿಲ್ಲ. ನಿನ್ನ ಕತ್ತು ಮುರಿಯುವೆ, ರಕ್ತ ಹೀರುವೆ ಎಂದು ಒದರಿತು. ಆಗ ಹಸು ಹುಲಿರಾಯನನ್ನು ಬೇಡಿಕೊಂಡಿತು;

ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ


ಆಗ ಹುಲಿಯು ಹೇಳಿತು:

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವ ಮಾಡದೆ ಬಿಡಲು ನೀನು
ನುಸುಳಿ ಹೊಗುವೆ ಮತ್ತೆ ಬಧುವೆಯ
ಹುಸಿಯನಾಡುವೆಯೆಂದಿತು

ಎಂತೆಂಥವರೋ ಸುಳ್ಳು ಹೇಳಿ ವಂಚಿಸಿದ್ದಾರೆ. ಈಗ ನೀನು ನನ್ನ ಕೈಗೆ ಸಿಕ್ಕಿರುವಾಗ ಬಿಟ್ಟು, ಬಿಟ್ಟರೆ ಮತ್ತೆಲ್ಲಿ ಬರುತ್ತೀಯಾ? ನಿನ್ನ ಮಾತನ್ನು ನಂಬುವವರು ಯಾರು? ಎಂದು ಮೂದಲಿಸಿತು. ಅದಕ್ಕೆ ಹಸುವು,

ಮೂರು ಮೂರ್ತಿಗಳಾಣೆ ಬರುವೆನು
ಸೂರ್ಯಚಂದ್ರಮರಾಣೆ ಬರುವೆನು
ಧಾರುಣೀ ದೇವಿಯಾಣೆ ಬರುವೆನು

ಎಂದು ಸೂರ್ಯಚಂದ್ರರ ಮೇಲೆ ಆಣೆಯಿಟ್ಟಿತು. ದೇವರಾಣೆ, ಕರುವಿಗೆ ಹಾಲು ಕುಡಿಸಿ ಮರಳಿ ಬರುವೆನೆಂದು ಭಾಷೆ ಕೊಟ್ಟಿತು. ಪುಣ್ಯಕೋಟಿಯು ದೇವರ ಮೇಲೆ ಆಣೆಯಿಟ್ಟು ಭಾಷೆ ಕೊಟ್ಟ ಮೇಲೆ ಹುಲಿ ಅದಕ್ಕೆ ದೊಡ್ಡಿಗೆ ಹೋಗಿ ಬರಲು ಅಪ್ಪಣೆ ಕೊಟ್ಟಿತು.



ಅಮ್ಮ ನೀನು ಸಾಯಲೇತಕೆ ಎಂದು ಕರು ಕೇಳಿತು

ಪುಣ್ಯಕೋಟಿ ಬೇಗ ಬೇಗ ದೊಡ್ಡಿಯನ್ನು ಸೇರಿತು. ಕರುವನ್ನು ಬಳಿಗೆ ಕರೆದು ಮೊಲೆಯನ್ನು ಕೊಟ್ಟಿತು. ನಾನು ಸತ್ತಮೇಲೆ ಮುಂದೆ ನೀನು ಹೇಗೆ ಬದುಕುವೆಯೋ ನಾ ಕಾಣೆ ಎಂದು ಕರುವನ್ನು ತಬ್ಬಿಕೊಂಡು ನೇವರಿಸಿತು. ತನ್ನನ್ನು ಹುಲಿ ತಡೆದ ಬಗೆಯನ್ನು ತಾನು ಗವಿಯ ಬಳಿಗೆ ಮರಳಿ ಬರುವುದಾಗಿ ಮಾತು ಕೊಟ್ಟು ಬಂದಿರುವುದನ್ನು ವಿವರಿಸಿತು. ಕರುವಿಗೆ ಕೆಲವು ಬುದ್ಧಿ ಮಾತುಗಳನ್ನು ಹೇಳಿತು;

ಕಟ್ಟ ಕಡೆಯಲಿ ಮೇಯಬೇಡ
ಬೆಟ್ಟದೊತ್ತಿಗೆ ಹೋಗಬೇಡ
ದುಷ್ಟವ್ಯಾಘ್ರ ಹೊಂಚುತಿರುವನು
ನಟ್ಟ ನಡುವಿರು ಕಂದನೆ

ತನ್ನ ತಾಯಿಯ ಮಾತುಗಳನ್ನು ಕೇಳಿ ಕರುವಿಗೆ ಸುಮ್ಮಾನವೆಲ್ಲ ಅಡಗಿಹೋಯಿತು.

ಅಮ್ಮ ನೀನು ಸಾಯಲೇತಕೆ
ಎನ್ನ ತಬ್ಬಲಿ ಮಾಡಲೇಕೆ
ಸುಮ್ಮನಿಲ್ಲಿಯೆ ನಿಲ್ಲೆನುತ್ತ
ಅಮ್ಮನಿಗೆ ಕರು ಹೇಳಿತು.

ಆದರೆ ಪುಣ್ಯಕೋಟಿ ಅದಕ್ಕೆ ಒಪ್ಪಲಿಲ್ಲ. ಕರುವನ್ನು ಸಮಾಧಾನಮಾಡುತ್ತಾ ಹೀಗೆ ಹೇಳಿತು;

ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆನಲ್ಲಿಗೆ
ಕಟ್ಟ ಕಡೆಗಿದು ಖಂಡಿತ

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಸರ್ವ ಬಳಗವು
ಸತ್ಯ ವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಜಗದೀಶನು

ತಾಯಿಯ ನಿರ್ಧಾರದಿಂದ ಕರುವಿನ ದುಃಖ ಇನ್ನಷ್ಟು ಹೆಚ್ಚಾಯಿತು.

ಆರ ಮೊಲೆಯನು ಕುಡಿಯಲಮ್ಮ
ಆರ ಸೇರಿ ಬದುಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ಎನಗೆ ಹಿತವರು

ಎಂದು ಗೋಳಾಡಿತು. ಆದರೆ ಪುಣ್ಯಕೋಟಿ ಹೊರಟೇ ಬಿಟ್ಟಿತು. ಹೊರಡುವ ಮುನ್ನ ಇತರ ಹಸುಗಳನ್ನು ಕರೆದು ತನ್ನ ಕಂದನನ್ನು ಅವರ ವಶಕ್ಕೆ ಒಪ್ಪಿಸಿತು. ಅದನ್ನು ಜೋಪಾನವಾಗಿ ಕರುಣೆಯಿಂದ ನೋಡಿಕೊಳ್ಳಲು ಪ್ರಾರ್ಥಿಸಿಕೊಂಡಿತು;

ಅಮ್ಮಗಳಿರಾ ಅಕ್ಕಗಳಿರಾ
ಎನ್ನ ತಾಯೊಡಹುಟ್ಟುಗಳಿರಾ



ಹಸು ಮಂದೆ ಬಿಟ್ಟು ತೆರಳಿತು

ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಮಗುವನು

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ

ಕಂದನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು

ಆಗ ಹಸುಗಳೆಲ್ಲ ಪುಣ್ಯಕೋಟಿಯ ಸಂಗಡ ತಾವೂ ಬರುವುದಾಗಿ ಹೇಳಿದವು. ನೀವು ನನ್ನೊಡನೆ ಬರುವುದು ಉಚಿತವಲ್ಲ; ಇದು ನಾನು ಪಡೆದ ಫಲ ಎಂದು ಪುಣ್ಯಕೋಟಿ ಸಮಾಧಾನ ಹೇಳಿತು. ಅದರ ಕರುವನ್ನು ತಮ್ಮ ಕರುಗಳಂತೆಯೇ ನೋಡಿಕೊಳ್ಳುವುದಾಗಿ ಹಸುಗಳೆಲ್ಲ ಪುಣ್ಯಕೋಟಿಗೆ ಭಾಷೆ ಇತ್ತವು. ತಾನು ಇನ್ನು ನಿಶ್ಚಿಂತೆಯಿಂದ ಪ್ರಾಣ ಬಿಡಬಹುದೆಂದು ಪುಣ್ಯಕೋಟಿ ಹೇಳಿತು.

ತಬ್ಬಲಿಯಾದೆಲ್ಲೊ ಮಗನೆ
ಹೆಬ್ಬುಲಿಯ ಬಾಯಿಗೆ ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಕೊಂಡಿತು ಕಂದನ

"ಇಬ್ಬರಾ ಋಣ ತೀರಿತೆಂದು" ಕರುವನ್ನು ಪುಣ್ಯಕೋಟಿಯು ಕಡೆಯ ಬಾರಿಗೆ ತಬ್ಬಿಕೊಂಡಿತು.

ಕರುವು ತನ್ನ ದೌರ್ಭಾಗ್ಯವನ್ನು ನೆನೆದು ಗೋಳಾಡಿತು. ನಾನು ಎಂಥ ಪಾಪಿ, ಇನ್ನು ಮುಂದೆ ಯಾರನ್ನು ಅಮ್ಮನೆಂದು ಕರೆಯಲಿ ಎಂದು ಅತ್ತಿತು. ಕಂದನಿಗೆ ಮತ್ತೆ ಉಚಿತವಾದ ಬುದ್ಧಿ ಮಾತುಗಳನ್ನು ಹೇಳಿ ಪುಣ್ಯಕೋಟಿ ದೊಡ್ಡಿಯಿಂದ ಹೊರಟಿತು. ನದಿಯಲ್ಲಿ ಸ್ನಾನ ಮಾಡಿ, ಹುಲಿಯ ಗವಿಯ ಬಾಗಿಲಲ್ಲಿ ನಿಂತು ಕೂಗಿ ಕರೆಯಿತು.



"ಖಂಡವಿದೆಕೊ ಮಾಂಸವಿದೆಕೊ" ಎಂದು ಹಸು ಹುಲಿಗೆ ಹೇಳಿತು

ಅಣ್ಣ ಬಾರೋ ಹುಲಿಯ ರಾಯನೆ
ಹಸಿದೆಯಲ್ಲೋ ದೋಷ ಬಂದಿತು
ಎನ್ನ ಆಹಾರವನು ಬೇಗನೆ
ಕೊಳ್ಳಲೋ ಹುಲಿರಾಯನೆ

ಖಂಡವಿದೆಕೊ ಮಾಂಸವಿದೆಕೊ
ಗುಂಡಿಗೆಯ ಬಿಸಿರಕ್ತವಿದೆಕೊ
ಉಂಡು ಸಂತಸಗೊಂಡು ನೀನು
ಭೂಮಿಯೊಳು ಬಾಳಯ್ಯನೆ

ಪುಣ್ಯಕೋಟಿಯು ತನ್ನ ಗವಿಗೆ ಮರಳಿ ಬಂದುದನ್ನು ಕಂಡು ಹುಲಿಗೆ ಆಶ್ಚರ್ಯವಾಯಿತು. ಅದರ ಮಾತುಗಳನ್ನು ಕೇಳಿ ಕಸಿವಿಸಿಗೊಂಡಿತು. ತನ್ನ ಮನಸ್ಸಿನಲ್ಲಿ ಹೀಗೆ ಅಂದುಕೊಂಡಿತು;

ಕನ್ನೆಯಿವಳನು ಕೊಂದು ತಿಂದರೆ
ಎನ್ನ ನರಹರಿ ಮೆಚ್ಚನು

ಪುಣ್ಯಕೋಟಿಯ ನಡವಳಿಕೆಯಿಂದ ಹುಲಿಯ ಮನಸ್ಸು ಕರಗಿತ್ತು; ಅದರ ಮನಸ್ಸು ಪರಿವರ್ತನೆಯಾಗಿತ್ತು.

ಎನ್ನ ಒಡಹುಟ್ಟಕ್ಕ ನೀನು
ನಿನ್ನ ತಿಂದು ನಾನೇನ ಪಡೆವೆನು
ನಿನ್ನ ಪಾದದ ಮೇಲೆ ಬಿದ್ದು
ಎನ್ನ ಪ್ರಾಣವ ಬಿಡುವೆನು

ಮುನ್ನ ನೂರು ಗೋವ ಕೊಂದ
ಅನ್ಯಕಾರಿ ಪಾಪಿ ನಾನು
ಇನ್ನು ಇರಿಸಲು ಏಕೆ ಪ್ರಾಣವ
ಬಿಡುವೆನೆಂದು ಪೇಳಿತು

ಎಂದು ಹುಲಿ ಹೇಳಿತು.

ಅಮ್ಮ ನೀನು ಸತ್ಯವಂತೆಯು
ನಿನ್ನ ದರುಶನ ಮಾತ್ರದಿಂದಲಿ
ನಾನು ಪೂರ್ವದಿ ತಂದ ಫಲವು
ಇಂದು ಪರಿಹಾರವಾಯಿತು

ಎಂದು ಪುಣ್ಯಕೋಟಿಯನ್ನು ಕೊಂಡಾಡಿತು. ತನ್ನ ನಡವಳಿಕೆಗಾಗಿ ಪಶ್ಚಾತ್ತಾಪ ಪಟ್ಟಿತು. ಆದರೆ ಪುಣ್ಯಕೋಟಿಯು ತನ್ನನ್ನು ತಿಂದು ಹಸಿವನ್ನು ಹಿಂಗಿಸಿಕೊಳ್ಳುವಂತೆ ಹುಲಿಯನ್ನು ಒತ್ತಾಯಿಸಿತು.

ಯಾಕಯ್ಯಾ ಹುಲಿರಾಯ ಕೇಳು
ಜೋಕೆಯಿಂದಲಿ ಎನ್ನನೊಲ್ಲದೆ
ನೂಕಿ ನೀನು ಸಾಯಲೇತಕೆ
ಬೇಕೆಂದು ನಾ ಬಂದೆನು

ನಿನ್ನ ಪ್ರಾಣವ ತೊರೆಯಲೇತಕೆ
ಕನ್ನೆಯೆನ್ನನು ತಿಂದುಬದುಕದೆ
ಮುನ್ನ ನಿನ್ನಯ ತೃಷೆಯ ಸಲಹಿಕೊ
ಪನ್ನಗಶಯನನೀಗೆ ಪ್ರಿಯವು



ಹುಲಿ ಬೆಟ್ಟದಿಂದ ಹಾರಿತು

ಎಂದು ಹುಲಿಯನ್ನು ಸಮಾಧಾನ ಪಡಿಸಲು ಯತ್ನಿಸಿತು. ಪುಣ್ಯಕೋಟಿಯ ಮಾತುಗಳನ್ನು ಕೇಳಿ ಹುಲಿಯ ಕಣ್ಣಲ್ಲಿ ನೀರು ಸುರಿಯಿತು. ತಾನು ಎಂಥ ಪಾಪಿ ಎಂದು ಹೇಳಿಕೊಳ್ಳುತಾಪಿ.

ಮೂರು ಮೂರ್ತಿಗೆ ಕೈಯ ಮುಗಿದು
ಸೇರಿ ಎಂಟು ದಿಕ್ಕನೋಡಿ



ಹಸುವಿನ ಪ್ರಾಮಾಣಿಕತೆಯನ್ನು ಮೆಚ್ಚಿ ಪ್ರಾಣಬಿಟ್ಟ ಹುಲಿ

ಹಾರಿ ಆಕಾಶಕ್ಕೆ ನೆಗೆದು
ತನ್ನ ಪ್ರಾಣವ ಬಿಟ್ಟಿತು.



ಪುಣ್ಯಕೋಟಿ ಮರಳಿಬಂದುದನ್ನು ಕಂಡು ಕರು ಸಂತೋಷ ಪಟ್ಟಿತು

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ: ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು